ಒದಗಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು. ಮಾನ್ಯ ಸದಸ್ಯರು ನಂಜನಗೂಡು ಪುರಸಭೆಯವರನ್ನು ಪ್ರೇರೇಪಿಸಿ ನೀರಿನ ತೊಟ್ಟಿಯನ್ನು ಕಟ್ಟಲು ಏರ್ಪಾಟು ಮಾಡಿದ್ದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ರೇವಣ್ಣ ಸಿದ್ದಯ್ಯನವರೇ, ನಿಮ್ಮ ವಿಷಯವನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು,—ಮಾನ್ಯ ದೇಶ್‌ಮುಖ್ ಅವರು ಎರಡು ಹೇಳಿಕೆಗಳನ್ನು ಮಾಡಿದರು ಅವರು ಯಾವ ಭಾಷೆಯಲ್ಲಿ ಹೇಳಿಕೆ ಕೊಟ್ಟರು ಎಂಬುದನ್ನು ಮಾನ್ಯ ಅಧ್ಯಕ್ಷರು ಹೇಳಬೇಕು. ಇಲ್ಲ ಹಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಬಿಜಾಪುರದ ಕಡೆಯ ಕನ್ನಡ ಭಾಷೆ.

X) ತುಂಗಭದ್ರಾ ನೀರನ್ನು ಒದಗಿಸುವ ಬಗ್ಗೆ

ಶ್ರೀ ರೇವಣಸಿದ್ದಯ್ಯ —ಅಧ್ಯಕ್ಷರೇ, ತುಂಗಭದ್ರಾ ನೀರನ್ನು ಪ್ರತಿ ವರ್ಷ ಬಿಡುವಂತೆ ಈ ವರ್ಷ ಬೆಳೆಗಳಿಗೆ ಬಿಡುತ್ತಾ ಇಲ್ಲ ಇದರಿಂದಾಗಿ ಸುಮಾರು ೫ ಲಕ್ಷ ಎಕರೆಯಲ್ಲಿ ಬೆಳೆ ಒಣಗುತ್ತಾ ಇದೆ. ಅದೂ ಅಲ್ಲದೆ ೨೦ ಪರ್ಸೆಂಟ್ ನೀರನ್ನು ಸಹಾ ಕಟ್ ಮಾಡಿದ್ದಾರೆ. ಈಗ ಇರುವ ನೀರಿನಲ್ಲಿ ಮೇ ೧೦ನೇ ತಾರೀಖಿನವರೆಗೆ ನೀರನ್ನು ಸರಬರಾಜು ಮಾಡಲು ಆಗುತ್ತದೆಯೇ ಎಂಬುದೇ ಅನುಮಾನವಾಗಿದೆ ಈ ಕಾರಣದಿಂದ ಭದ್ರಾ ನೀರನ್ನು ತುಂಗಭದ್ರಾಗೆ ಬಿಟ್ಟು ಈ ಜನರಿಗೆ ನೀರನ್ನು ಪೂರೈಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆ ಇರುವುದು ನಿಜ. ಆದ್ದರಿಂದ ಬೇಗನೆ ಮಳೆ ಬರಲಿ ಎಂದು ದೇವರನ್ನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಭದ್ರಾದಲ್ಲಿನ ನೀರನ್ನು ಬಿಡಿ ಎಂದು ಹೇಳಿದ್ದಾರೆ. ಆದರೆ ಆಲ್ಲಿರತಕ್ಕ ಬೆಳೆಯನ್ನು ರಕ್ಷಣೆ ಮಾಡಿಕೊಂಡು ಆಮೇಲೆ ನಾವಡಕೂ ನೀರು ಸಿಕ್ಕಿದರೆ ಅದನ್ನು ಬಿಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆಂದು ಸಹಾ ಮೊನ್ನೆ ಹೇಳಿದ್ದೇನೆ. ಹಾಗೂ ಆಂಧ್ರಾದವರೂ ಸಹಾ ಕುಡಿಯುವುದಕ್ಕೆ ನೀರನ್ನು ಕೊಡಿ ಎಂದು ಕೇಳುತ್ತಿದ್ದಾರೆ ಹಾಗೂ ಬಳ್ಳಾರಿ ಮತ್ತು ರಾಯಚೂರಿನವರೂ ನಗರಕ್ಕೆ ನೀರುಬೇಕೆಂದು ಹೇಳುತ್ತಿದ್ದಾರೆ. ಆದುದರಿಂದ ಇವೆಲ್ಲಾ ಪರಿಶೀಲನೆಯ ಹಂತದಲ್ಲಿ ಇದ್ದು ಎಷ್ಟು ನೀರನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಯೋಚನೆ ಮಾಡುತ್ತದೆ.

XI) ಕಿತ್ತೂರು ರೈಲಿನಲ್ಲಿ ಸಬ್‌ಇನ್ಸ್‌ಪೆಕ್ಟರ್‌ರವರ ಅಸಭ್ಯ ವರ್ತನೆ

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಿಯಮ ೩೩೯ರ ಕೆಳಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಮೊನ್ನೆ ದಿವಸ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುವ ಸಮಯದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ನಡೆದುಕೊಂಡ ರೀತಿಯನ್ನು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಪಕ್ಕದ ಕಂಪಾರ್ಟ್‌ಮೆಂಟ್‌ನಲ್ಲಿ ರಾತ್ರಿ ಸಿಕ್ಕಾಪಟ್ಟೆ ಕುಡಿದು ಅಲ್ಲಿ ಇದ್ದ ನಾಗರಾಜಯ್ಯ ಎಂಬ ಟಿ.ಟಿ.ಯೇ ಗಲಾಟೆ ಮಾಡಿ ಅವರಿಗೆ ಹೊಡೆದು ಅವರಿಗೆ ರಕ್ತ ಬರುತ್ತಾ ಇತ್ತು. ಆಗ ನಾವು ಅಲ್ಲಿ ಹೋಗಿ ಗಲಾಟೆ ಮಾಡಲಿಲ್ಲ ಆತ ಹೆಚ್ಚು ಕುಡಿದಿದ್ದರಿಂದ ವಾಂತಿ ಸಹಾ ಮಾಡಿಕೊಂಡರು ನಾವು ಹೋಗಿ ಕೇಳಿದಾಗ ಸರಿಯಾಗಿ ಉತ್ತರ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಆ ಗಲಾಟೆಯ ಸಮಯದಲ್ಲಿ ಜನ ರೈಲನ್ನು ಸಹಾ ತಡೆದರು. ಆಗ ಅವರನ್ನೆಲ್ಲಾ ಸಮಾಧಾನ ಮಾಡಿ ರೈಲು ಬೆಂಗಳೂರು ತಲುಪಲು ಅನುವು ಮಾಡಿದೆವು. ಬೆಂಗಳೂರಿಗೆ ಬಂದಮೇಲೆ ಡಿ.ಐ.ಜಿ. ವಿಶ್ವನಾಥ್ ಅವರಿಗೆ ವಿಷಯ ವಿವರಿಸಲಾಗಿ ಅವರು ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆಂದಷ್ಟೇ ಹೇಳಿದರು. ಒಬ್ಬ ಪೋಲೀಸ್ ಅಧಿಕಾರಿ ಈರೀತಿ ಕುಡಿದು ಗೊಂದಲ ಮಾಡುವುದು ಸರಿಯೇ ? ಅದೂ ಆ ಕಂಪಾರ್ಟ್‌ಮೆಂಟಿನಲ್ಲಿ ಹೆಣ್ಣು ಮಕ್ಕಳೂ ಸಹ ಪ್ರಯಾಣ ಮಾಡುತ್ತಿದ್ದರು. ಈಗ ಆ ಅಧಿಕಾರಿಯಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ಅವರನ್ನು ಸಸ್ಪೆಂಡ್ ಮಾಡಿ ಇನ್‌ವೆಸ್ಟಿಗೇಷನ್ ಮಾಡಲಾಗುತ್ತಿದೆಯೇ ಎಂಬುದನ್ನು ಮಾನ್ಯ ಗೃಹ ಮಂತ್ರಿಗಳು ತಿಳಿಸಬೇಕು

ಶ್ರೀ ಬಿ. ರಾಚಯ್ಯ.—ಕಿತ್ತೂರು ರೈಲಿನಲ್ಲಿ ಪ್ರಯಾಸ ಮಾಡುವಾಗ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಕುಡಿದು ಅಲ್ಲಿನ ಟಿ.ಟಿ.ಇ. ಮೇಲೆ ಹಲ್ಲೆ ಮಾಡಿದರು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ

ಇಲ್ಲಿ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರೂ ಕೂಡಾ ಅದೇ ರೈಲಿನಲ್ಲಿ ಪ್ರವಾಸ ಮಾಡುತ್ತಿದ್ದರಂತೆ ಇದರ ಬಗ್ಗೆ ಡಿಐಜಿ ಯವರಿಂದ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಂದ ವರದಿ ಸರ್ಕಾರಕ್ಕೆ ಬಂದಿದೆ ತಕ್ಷಣ ಅವರನ್ನು ಅಮಾನತ್ತಿನಲ್ಲಿಡಿಸಿ ಎನ್‌ಕ್ವೈರಿ ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ

xii) ಪುತ್ತೂರು ತಾಲ್ಲೂಕಿನ ಗುತ್ತಿಗಾರ್ ಉಪ್ಪಿನಂಗಡಿ ಹಾಗೂ ಸುಬ್ರಹ್ಮಣ್ಯ ರೇಂಜ್‌ಗಳಲ್ಲಿ ಬೆಂಕಿ ಬಿದ್ದು ನಷ್ಟವಾಗಿರುವ ಬಗ್ಗೆ

ಶ್ರೀ ವಿನಯ ಕುಮಾರ್ ಸೊರಕೆ.—ಪುತ್ತೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಗೆ ಸೇರಿದ ಗುತ್ತಿಗಾರ್ ರೇಂಜ್ ಉಪ್ಪಿನಂಗಡಿ ರೇಂಜ್ ಹಾಗೂ ಸುಬ್ರಹ್ಮಣ್ಯ ರೇಂಜ್‌ಗಳಲ್ಲಿ ಬೆಂಕಿ ಬಿದ್ದು ಸುಮಾರು ನಾಲ್ಕು ಕೋಟಿ ರೂಪಾಯಿಗಿಂತಲೂ ಹೆಚ್ಚು ಮೌಲ್ಯದ ಮರಗಳು ನಾಶವಾಗಿದ್ದು ಬೆಂಕಿ ಇನ್ನೂ ನಂದಿಲ್ಲ ದಿದ್ದು ಸರಕಾರದವರು ಈ ದಿಸೆಯಲ್ಲಿ ಇನ್ನೂ ಯಾವ ಕ್ರಮವನ್ನೂ ಕೈಕೊಳ್ಳದಿರುವ ಬಗ್ಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಯವರು).—ಉಪ್ಪಿನಂಗಡಿ ಸುಬ್ರಹ್ಮಣ್ಯ ಗುತ್ತಿಗಾರ್ ಅರಣ್ಯ ರೇಂಜ್‌ಗಳಲ್ಲಿ ಬೆಂಕಿ ಬಿದ್ದದ್ದು ನಿಜ. ಈ ಬೆಂಕಿ ಮಾರ್ಚಿ ತಿಂಗಳ ಎರಡನೇ ವಾರ ದಲ್ಲಿ ಬಿದ್ದಿತು (ದಿನಾಂಕ ೧೧, ೧೨, ೧೩) ಇದು ಕಂಡ ಕೂಡಲೆ ಅರಣ್ಯ ಇಲಾಖೆಯವರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದರು. ಈ ಕೆಲಸಕ್ಕಾಗಿ ನೂರಾರು ಜನರನ್ನು ಉಪಯೋಗಿಸಿಕೊಳ್ಳಲಾಯಿತು ಈ ಬೆಂಕಿ ದೂರ ದೂರದಲ್ಲಿ ಕಂಡದ್ದು ಮತ್ತು ಗಾಳಿಗೆ ಹರಡಿ ಜಾಸ್ತಿಯಾದಂದರಿಂದ ಬೆಂಕಿಯನ್ನು ನಂದಿಸಲು ಎರಡು-ಮೂರು ದಿವಸಗಳು ತಡವಾಯಿತು ಆದರೆ ಮೂರು ದಿವಸಗಳಲ್ಲಿ ಪೂರ್ತಿ ಬೆಂಕಿ ಯನ್ನು ನಂದಿಸಲಾಯಿತು. ಅದೂ ಅಲ್ಲದೆ ಈ ಬೆಂಕಿಯು ಮಗ್ಗಲಿನ ಕಾಡುಗಳಿಗೆ ಹರಡದಂತೆ ಕ್ರಮ ತೆಗೆದು ಕೊಳ್ಳಲಾಗಿದೆ. ಇದಕ್ಕಾಗಿ ಅರಣ್ಯ ಇಲಾಖೆಯ ಎಲ್ಲಾ ಸಿಬ್ಬಂದಿಯನ್ನು ಮತ್ತು ಸ್ಥಳೀಯ ಜನಗಳ ಸಹಾಯವನ್ನೂ ಪಡೆದುಕೊಳ್ಳಲಾಯಿತು. ಈ ಬೆಂಕಿಯು ಬರೀ ಭೂಮಿಯ ಮೇಲೆ ಮಾತ್ರ ಹರಿದುದರಿಂದ ಯಾವ ದೊಡ್ಡ ಮರಗಳಿಗೂ ಹಾನಿಯಾಗಿಲ್ಲ. ಬರೀ ನೆಲದ ಮೇಲೆ ಬೆಂಕಿ ಬಿದ್ದು ಒಣಗಿದ ಸಣ್ಣ ಸಣ್ಣ ಕೊಂಬೆಗಳು ಸುಟ್ಟು ಹೋಗಿವೆ ಇದಲ್ಲದೆ ಹೊಸದಾಗಿಬಂದ ಸಣ್ಣ ಸಣ್ಣ ಗಿಡಗಳು ಕೂಡ ಸುಟ್ಟಿರುವುದಲ್ಲದೆ ಯಾವ ದೊಡ್ಡ ಮರಗಳೂ ಸುಟ್ಟಿಲ್ಲ.

ಅರಣ್ಯಕ್ಕೆ ಬೆಂಕಿ ಬೀಳುವುದು ಪ್ರತಿವರ್ಷ ಸರ್ವೇ ಸಾಮಾನ್ಯ ಬಹಳ ಒಣ ಹವೆ ಇರುವುದರಿಂದ ಈ ವರ್ಷದಲ್ಲಿ ಬೆಂಕಿ ಬೀಳುವುದು ಜಾಸ್ತಿಯಾಗಿರುತ್ತದೆ. ಅರಣ್ಯದ ಬೆಂಕಿಗಳಿಗೆ ಮುಖ್ಯವಾಗಿ ಜನಗಳ ನಿರ್ಲಕ್ಷವೇ ಕಾರಣ ರಾತ್ರಿ ವೇಳೆ ಕಾಡಿನಲ್ಲಿ ತಿರುಗಾಡುವ ಜನಗಳು ಬೆಂಕಿ ಹಾಕಿ ನಂದಿಸದೆ ಹೋಗು ತ್ತಾರೆ ಮತ್ತು ಜನಗಳು ದನಗಳಿಗಾಗಿ ಹೊಸ ಹುಲ್ಲು ಬರುತ್ತದೆ ಎಂಬ ಉದ್ದೇಶದಿಂದ ಕಾಡುಗಳಿಗೆ ಬೆಂಕಿ ಹಾಕುತ್ತಾರೆ. ಇದು ದುರಾದೃಷ್ಟಕರ. ಯಾವುದೇ ಭಾಗದಲ್ಲಿ ಬೆಂಕಿ ಕಾಡುಗಳಲ್ಲಿ ಕಂಡಕೂಡಲೇ ಅರಣ್ಯ ಇಲಾಖೆಯವರು ನಂದಿಸುವ ಕ್ರಮ ಕೈಗೊಳ್ಳುತ್ತಾರೆ. ಆದರೂ ಅರಣ್ಯ ಇಲಾಖೆಯ ಈ ಕೆಲಸ ಕ್ಕಾಗಿ ಹೆಚ್ಚಿನ ಹಣ ಮತ್ತು ಸಿಬ್ಬಂದಿಯ ಅವಶ್ಯಕತೆ ಇದೆ. ಇದನ್ನು ಪೂರೈಸಲು ಕ್ರಮ ಕೈಗೊಳ್ಳ ಲಾಗುವುದು.

(xiii) ಹೊಸನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಪೋಲೀಸರಿಂದ ಕಿರುಕುಳ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ಈಗ ವಿಧಾನ ಸಭೆ ನಡೆಯುತ್ತಿದೆ. ಈಗಲೂ ಕೂಡ ಹಳ್ಳಿಗಾಡಿನಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲೇ ಅಲ್ಲದೆ ರಾಜ್ಯದ ನಾನಾಕಡೆ ಕಾಂಗ್ರೆಸ್ ಪಕ್ಷಕ್ಕೆ ಮತ ಕೊಟ್ಟಂಥ ವಂತದಾರರಿಗೆ ಆಳುವ ಪಕ್ಷದವರು ಬಹಳ ಜಾಸ್ತಿಯಾಗಿ ಕಿರುಕುಳ ಪನ್ನು ಕೊಡುತ್ತಿದ್ದಾರೆಂಬ ದೂರುಗಳು ಬರುತ್ತಿವೆ. ನನ್ನ ಕ್ಷೇತ್ರದಲ್ಲಿ ಈ ರೀತಿಯ ಕಿರುಕುಳದಿಂದಾಗಿ ಸುಮಾರು ೪-೫ ಜನರು ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ ಸುಮಾರು ೧೦-೧೨ ಜನರು ಸತ್ತಿದ್ದಾರೆ. ಕ್ಯಾಂಗ್ರೆಸ್‌ಗೆ ಮತ ಕೊಟ್ಟ ಜನರು ಈ ಕಿರುಕುಳವನ್ನು ತಡೆಯಲಾರದೆ ಪೋಲೀಸ್ ಸ್ಟೇಷನ್‌ಗಳಿಗೆ ಹೋಗಿ ದೂರುಗಳನ್ನು ಕೊಡಲು ಹೋದಾಗ ಅವರನ್ನೇ ಬೆದರಿಸಿ ಕಳುಹಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನನ್ನ ಪಕ್ಷದ ಕ್ಷೇತ್ರವಾದ ತೀರ್ಥಹಳ್ಳಿಯಿಂದ ಜಯಶೀಲರಾದ ಕಾಂಗ್ರೆಸ್ ಅಭ್ಯರ್ಥಿಗೆ ಹೂವಿನ ಹಾರ ಹಾಕಲು ಹೋದಾಗ ಆ ಜನರಿಗೆ ಪೋಲೀಸರು